- ಕಡತ ವಿಲೇವಾರಿಗಾಗಿ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಹೆಚ್ಚಿನ ಕಡತಗಳು ಬಾಕಿ ಇರುವ ಗ್ರಾಮಗಳನ್ನು ಆಯ್ಕೆ ಮಾಡಿ ಅಳತೆ ಕಾರ್ಯ ಪ್ರಾಯೋಗಿಕವಾಗಿ ಪ್ರಾರಂಭಿಸಲು ಯೋಜಿಸಿದ್ದು. ಅದರಂತೆ ಬಿಜಾಪುರ ಜಿಲ್ಲೆ. ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಅಳತೆ ಕಾರ್ಯ ಪ್ರಾರಂಭಿಸಲಾಗಿದೆ.

ಭೂ ಮಂಜೂರಾತಿ

2111 (3160); ಶ್ರೀ ಚಿಕ್ಕಮಾದು ಎಸ್.

ಅ) ಹೆಗ್ಗಡ ದೇವನ ಕೋಟೆ ತಾಲ್ಲೂಕಿನಲ್ಲಿ ನಮೂನೆ 50/53 ರಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಪೈಕಿ – ಎಷ್ಟು ಅರ್ಜಿ ಸಕ್ರಮಗೊಳಿಸಲಾಗಿದೆ ಹಾಗೂ ಸಕ್ರಮಗೊಳಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ಬಾಕಿ ಅರ್ಜಿಗಳನ್ನು ಸಕ್ರಮಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ನಮೂನೆ 50/53 ರಲ್ಲಿ ಅರ್ಜಿ ಸಲ್ಲಿಸಿ, ಮಂಜೂರಾತಿ ಪಡೆದ ರೈತರು ಸಾಗುವಳಿ ಚೀಟಿ ಪಡೆಯದೆ ಇರುವ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ;

ಇ) ತಾಲ್ಲೂಕು ಅಕ್ರಮ–ಸಾಗುವಳಿ ಸಕ್ರಮ ಸಮಿತಿಯಿಂದ ನಮೂನೆ 50/53 ರಲ್ಲಿ ಅರ್ಜಿ ಸಲ್ಲಿಸಿರುವ ರೈತರು ಭೂ ಮಂಜೂರಾತಿ ಪಡೆದಿದ್ದು, ಕಾರಣಾಂತರಳಿಂದ ಸಾಗುವಳಿ ಚೀಟಿ ಪಡೆಯದೆ ಇರುವ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ; ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಈ) ಅಕ್ರಮ–ಸಾಗುವಳಿ ಸಕ್ರಮ ಸಮಿತಿಯಿಂದ ಭೂ ಮಂಜೂರಾತಿ ಪಡೆದ ರೈತರು ಖಾತೆಯಾಗಿಲ್ಲದ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ; ಹಾಗಿದ್ದಲ್ಲಿ, ಖಾತೆ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ

ಕೈಗೊಂಡಿದೆ (ವಿಶೇಷವಾಗಿ ಪಹಣಿ 'ಗೋಮಾಳ' ವಿರುವ ಪ್ರಕರಣಗಳ ವಿವರ ನೀಡುವುದು)?

ಶ್ರೀ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ)

ನಮೂನೆ 50 ಮತ್ತು 53 ರಲ್ಲಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ		ನಮೂನೆ 50 ಮತ್ತು 53 ರಲ್ಲಿ ಅರ್ಜಿ ಸಕ್ರಮಗೊಳಿಸಿರುವ ಸಂಖ್ಯೆ		ನಮೂನೆ 50 ಮತ್ತು 53 ರಲ್ಲಿ ಬಾಕಿ ಅರ್ಜಿಗಳ ಸಂಖ್ಯೆ	
ನಮೂನೆ 50	ನಮೂನೆ 53	ನಮೂನೆ 50	ನಮೂನೆ 53	ನಮೂನೆ 50	ನಮೂನೆ 53
14893	16234	5481	604	96	3073

ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ 149 ಎಲ್‌ಜಿಎಂ 2013 ದಿನಾಂಕ: 30–01–2014 ರಂತೆ ಸಮಿತಿ ರಚನೆಯಾಗಿರುತ್ತದೆ.

ಆ) ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ನಮೂನೆ 50 ರಲ್ಲಿ 5481 ಹಾಗೂ ನಮೂನೆ 53 ರಲ್ಲಿ 604 ಪ್ರಕರಣಗಳಲ್ಲಿ ಮಂಜೂರಾಗಿದ್ದು, ಎಲ್ಲಾ ಮಂಜೂರಿದಾರರಿಗೆ ಸಾಗುವಳಿ ಚೀಟಿ ವಿತರಿಸಲಾಗಿದ್ದು, ಯಾವುದೇ ಅರ್ಜಿ ಬಾಕಿ ಇರುವುದಿಲ್ಲ.

ಇ) ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಸಾಗುವಳಿ ಚೀಟಿ ನೀಡಲು ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ.

ಈ) 106 ಪ್ರಕರಣಗಳು ಬಾಕಿ ಇರುತ್ತದೆ. 2008 ರಿಂದ ಈಚೆಗೆ ಸಾಗುವಳಿ ಚೀಟಿ ಮೇಲೆ ಯಾವುದೇ ಖಾತೆ ಕ್ರಮ ವಹಿಸಿರುವುದಿಲ್ಲ. ಸರ್ಕಾರಿ ಅಧಿಸೂಚನೆ ನಂ.ಆರ್‌ಡಿ 39 ಎಂಆರ್‌ಆರ್ 2005 ದಿನಾಂಕ: 11–07–2007ರಂತೆ ಖಾತೆ ಕ್ರಮ ವಹಿಸಲು ಕಡ್ಡಾಯವಾಗಿ

ಪ್ರೀಮ್ಯುಟೇಷನ್ ಸ್ಕೆಚ್ ಅವಶ್ಯಕತೆ ಇರುವುದರಿಂದ ಸಾಗುವಳಿ ಚೀಟಿ ಮೇಲೆ ಖಾತೆ ಕ್ರಮ ವಹಿಸಿರುವುದಿಲ್ಲ. ಪಹಣಿಯಲ್ಲಿ ಗೋಮಾಳ ಎಂಬ ಕಾರಣಕ್ಕೆ ಖಾತೆ ಮಾಡದೇ ಇರುವ ಪ್ರಕರಣಗಳು ಯಾವುದು ಇರುವುದಿಲ್ಲ.

ವರುಣಾ ನಾಲೆ ವ್ಯಾಪ್ತಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶ

2112 (2700); ಶ್ರೀ ಜಿ.ಟಿ.ದೇವೇಗೌಡ

ಅ) ವರುಣಾ ನಾಲೆ ವ್ಯಾಪ್ತಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು;

ಆ) ವರುಣಾ ನಾಲೆ ನೀರನ್ನು ಬಳಸಿ ಬೆಳೆ ಬೆಳೆಯುತ್ತಿರುವ ಪ್ರದೇಶದ ವಿಸ್ತೀರ್ಣವೆಷ್ಟು;

ಇ) ವರುಣಾ ನಾಲೆ ವ್ಯಾಪ್ತಿಗೆ ಒಳಪಡುವ ಕೆರೆಗಳ ಸಂಖ್ಯೆಯೆಷ್ಟು; (ಕೆರೆಗಳ ಹೆಸರು, ವಿಸ್ತೀರ್ಣವಾರು ಮಾಹಿತಿ ನೀಡುವುದು)

ಈ) ವರುಣಾ ನಾಲೆ ವ್ಯಾಪ್ತಿಗೆ ಒಳಪಡುವ ಪ್ರದೇಶಕ್ಕೆ ಇದುವರೆವಿಗೂ ನೀರನ್ನು ಒದಗಿಸದೇ ಇರುವ ಪ್ರದೇಶದ ವಿಸ್ತೀರ್ಣವೆಷ್ಟು;

ಉ) ಈ ಪ್ರದೇಶಕ್ಕೆ ನೀರನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ವರುಣಾ ನಾಲಾ ವ್ಯಾಪ್ತಿಗೆ 31741 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಒಳಪಡುತ್ತದೆ.

ಆ) ವರುಣಾ ನಾಲೆ ನೀರನ್ನು ಬಳಸಿ 21044 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆಯಲಾಗುತ್ತಿದೆ.

ಇ) ವರುಣಾ ನಾಲೆ ವ್ಯಾಪ್ತಿಯಲ್ಲಿ ಒಟ್ಟು 37 ಕೆರೆಗಳಿದ್ದು, ಕೆರೆಗಳ ಹೆಸರು ಮತ್ತು ವಿಸ್ತೀರ್ಣವಾರು ಮಾಹಿತಿಯನ್ನು ಅನುಬಂಧದರಲ್ಲಿ ಲಗತ್ತಿಸಿದೆ.